E-mail : academic.pg@kud.ac.in
Website: kud.ac.in

ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ -580003

# KARNATAK UNIVERSITY,

Phone: (0836) 2215270

Pavate Nagar, Dharwad-580 003
'A' Grade NAAC Accredited
University Potential for Excellence

Academic (PG/Ph.D) Section
ವಿದ್ಯಾಮಂಡಳ (ಪಿಜಿ/ಪಿಎಚ್.ಡಿ) ವಿಭಾಗ

**No.KU/Aca/P.G./Ph.D/Crt/2023-24/27** **Date :29.09.2023**

## ಸುತ್ತೋಲೆ

ವಿಷಯ: ಸನ್ 2023-24ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ವಿಷಯಗಳಿಗೆ UUCMS ಮುಖಾಂತರ ಪ್ರವೇಶ ಬಯಸಿ ಅರ್ಜಿ ಸಲ್ಲಿಸುವ ದಿನಾಂಕವನ್ನು ಮುಂದೂಡುವ ಕುರಿತು.

ಉಲ್ಲೇಖ:1.ಅಧಿಸೂಚನೆ ನಂ. KU/Aca/P.G./Adm/2023-24/216 dated:15.09.2023
2.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29-09-2023

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಸನ್ 2023-24ನೇ ಶೈಕ್ಷಣಿಕ ಸಾಲಿಗೆ ಎಲ್ಲ ಸ್ನಾತಕೋತ್ತರ ಪದವಿಗಳ ಮೊದಲನೇ ಸೆಮಿಸ್ಟರ್‌ನ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ /ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ UUCMS ತಂತ್ರಾಂಶದಲ್ಲಿ ಕೆಲವು ತಾಂತ್ರಿಕ ಕಾರಣಗಳಿಂದ ಕೆಲವೊಂದು ಮಹಾವಿದ್ಯಾಲಯಗಳ/ವಿಷಯಗಳ ಮಾಹಿತಿಯು UUCMS ತಂತ್ರಾಂಶದಲ್ಲಿ ಲಭ್ಯವಿಲ್ಲದ ಕಾರಣ ಮಹಾವಿದ್ಯಾಲಯಗಳನ್ನು /ವಿಷಯಗಳನ್ನು ಆದ್ಯತೆಯ ಮೇರೆಗೆ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದಾಗ್ಯೂ ಸ್ನಾತಕೋತ್ತರ ಪ್ರಥಮ ಸೆಮಿಸ್ಟರ್‌ಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳು UUCMS ತಂತ್ರಾಂಶದ ಮುಖಾಂತರ ಕಡ್ಡಾಯವಾಗಿ ದಿನಾಂಕ:04.10.2023ರವರೆಗೆ ಅರ್ಜಿ ಸಲ್ಲಿಸಿ ಸದರ ಪ್ರತಿಯನ್ನು ಕವಿವಿ ಆವರಣದ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಿಗೆ ದಿನಾಂಕ:05.10.2023ರ ಕಚೇರಿ ಅವಧಿಯ ಒಳಗಾಗಿ ಸಲ್ಲಿಸತಕ್ಕದ್ದು.

ಮುಂದುವರೆದು, ಪ್ರವೇಶಕ್ಕಾಗಿ ಮಹಾವಿದ್ಯಾಲಯಗಳನ್ನು/ವಿಷಯಗಳನ್ನು ಆದ್ಯತೆಯ ಮೇರೆಗೆ ಆಯ್ಕೆ ಮಾಡಿಕೊಳ್ಳಲು ಈಗಾಗಲೇ ಪ್ರಕಟಿಸಿದ ವೇಳಾಪಟ್ಟಿಯ ಪ್ರಕಾರ ಕೌನ್ಸಲಿಂಗ್ ಸಂದರ್ಭದಲ್ಲಿ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳಿಗೆ ಆದ್ಯತೆ ವಿನಂತಿಯನ್ನು ಸಲ್ಲಿಸುವುದು ಹಾಗೂ ಪ್ರವೇಶ ಪರೀಕ್ಷೆಗಳು ಈಗಾಗಲೇ ನಿಗದಿಪಡಿಸಿದ ದಿನಾಂಕಗಳಂದು ಜರಗುತ್ತವೆ.

ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು ಮೇಲಿನಂತೆ ಕ್ರಮವಹಿಸಲು ಈ ಮೂಲಕ ತಿಳಿಸಲಾಗಿದೆ

ಕುಲಸಚಿವರು

ಗೆ

1. ಎಲ್ಲ ನಿಖಾಯಗಳ ಡೀನರುಗಳು, ಕ.ವಿ.ವಿ.ಧಾರವಾಡ.
2. ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರು/ಸಂಯೋಜಕರು ಕ.ವಿ.ವಿ.ಧಾರವಾಡ.
3. ಅಧ್ಯಕ್ಷರು, ಕವಿವಿ ಸ್ನಾತಕೋತ್ತರ ಕಾನೂನು /ಎಂ.ಎಡ್ ಅಧ್ಯಯನ ವಿಭಾಗ, ಕಾಲೇಜ ರೋಡ, ಧಾರವಾಡ.
4. ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರಗಳು ಕಾರವಾರ/ದಾಂಡೇಲಿ/ಗದಗ.
5. ಪ್ರಾಚಾರ್ಯರು/ಸಂಯೋಜಕರು, ಕರ್ನಾಟಕ ಕಲಾ/ವಾಣಿಜ್ಯ/ವಿಜ್ಞಾನ ಮಹಾವಿದ್ಯಾಲಯ (ಸ್ನಾತಕೋತ್ತರ ಕೋರ್ಸುಗಳು), ಧಾರವಾಡ.
6. ಕುಲಸಚಿವರು (ಮೌಲ್ಯಮಾಪನ), ಪರೀಕ್ಷಾ ವಿಭಾಗ, ಕ.ವಿ.ವಿ ಧಾರವಾಡ.
7. ವಿತ್ತಾಧಿಕಾರಿಗಳು, ಹಣಕಾಸು ವಿಭಾಗ, ಕ.ವಿ.ವಿ. ಧಾರವಾಡ.
8. ಉಪಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ
9. ಡಾ. ಎಸ್.ಶಿವಶಂಕರ, ನೋಡಲ್ ಅಧಿಕಾರಿಗಳು (ವಿಶೇಷ ಆಹ್ವಾನಿತರು), ಯುಯುಸಿಎಂಎಸ್ (UUCMS) ವಿಭಾಗ, ಕ.ವಿ.ವಿ.ಧಾರವಾಡ.
10. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕ.ವಿ.ವಿ.ಧಾರವಾಡ.

ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:

1. ಕುಲಪತಿಗಳ, ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ, ಆಪ್ತ ಸಹಾಯಕರು, ಕ.ವಿ.ವಿ. ಧಾರವಾಡ.
3. ಕುಲಸಚಿವರ, (ಮೌಲ್ಯಮಾಪನ) ಇವರ ಆಪ್ತ ಸಹಾಯಕರು, ಕ.ವಿ.ವಿ. ಧಾರವಾಡ.